ತೆಳ್ಳವು ಅಂದ್ರೆ ಎಂತ? ನೀರ್ ದೋಸೆಯಾ?' ಅಂತ ಕೇಳ್ತಿದ್ರು. 'ಅಲ್ಲ ಅದು ನೀರು ದೋಸೆ ಅಲ್ಲ. ಮಗ್ಗೆಕಾಯಿ ಅಂತ ಸೌತೆಯ ಹಾಗಿರುವಂತದ್ದೇ ಒಂದು ಕಾಯಿ ಬರ್ತದೆ. ಅದನ್ನು ಅಕ್ಕಿಯೊಟ್ಟಿಗೆ ಬೀಸಿ, ತೆಳ್ಳಗೆ ಮಾಡಿಕೊಂಡು ದೋಸೆ ಕಾವಲಿಗೆ ಹಾಕುವುದು' ಅಂತ ಅವಳು ವಿವರಣೆ ಕೊಡ್ತಿದ್ಲು. 'ಅಯ್ಯೋ ನಿಮ್ಮ ಮನೆಯಲ್ಲಿ ದಿನಾಲೂ ಅಕ್ಕಿ ಕಡೀಬೇಕಾ ಹಾಗಾದ್ರೆ!?' ಅಂತ ಅವರು ಕೇಳಿದಾಗ ನನ್ನ ಹೆಂಡತಿ ಕಕ್ಕಾಬಿಕ್ಕಿ ಆದ್ಲು. ಮರ ಕಡಿಯುವುದು ಗೊತ್ತುಂಟು. ಇದೆಂತ ಅಕ್ಕಿ ಕಡಿಯುವುದು? ಅಂತ ಗಾಬರಿಯಾಗಿ ಕಣ್ಣು ಪಿಳಿ ಪಿಳಿ ಬಿಟ್ಟುಕೊಂಡು ನೋಡ್ತಾ ನಿಂತಿದ್ಲು. ಅವರ ಬಳಿ ಎಂತದೋ ಹೇಳಿ ಮನೆಗೆ ಬಂದಿದ್ಲು. ಸಂಜೆ ನಾನು ಬಂದ ನಂತರ ಇದೆಂಥ ಮಾರಾಯರೇ ಇಲ್ಲಿ 'ಅಕ್ಕಿಯನ್ನು ತುಂಡು ತುಂಡು ಮಾಡ್ತಾರಾ!?' ಅಂತ ಕೇಳಿದ್ಲು. ನಾನು 'ಎಂತ ವಿಷಯ'? ಅಂತ ಕೇಳಿದೆ. ಅವಳು ಪೂರ ಹೇಳಿದ ನಂತ್ರ ರುಬ್ಬುವುದನ್ನು ಕಡಿಯುವುದು ಅಂತ ಹೇಳ್ತಾರೆ ಅಂತ ಹೇಳಿದೆ.

ನಾವು ಮದುವೆಯಾದ ವರ್ಷ ಗೌರಿ ಹಬ್ಬಕ್ಕೆ ಅತ್ತೆ ಮನೆಗೆ ಹೋಗಬೇಕು ಎಂದು ತರಾತುರಿಯಿಂದ ಕಚೇರಿ ಮುಗಿಸಿ ಬಂದವನೇ ಹೊರಡಲು ಸಿದ್ದವಾಗುತ್ತಿದ್ದೆ. ನನ್ನಾಕೆ ಪಕ್ಕದ ಮನೆಯವರ ಬಳಿ ಹೋಗಿ ನಾವು ಎರಡು ಮೂರು ದಿನ ಇರುವುದಿಲ್ಲ ಮನೆಯ ಕಡೆ ಸ್ವಲ್ಪ ನೋಡಿಕೊಳ್ಳಿ ಎಂದರು. ಅವರು ಆಯಿತು ಎಂದರು. ಬೀಗ ಹಾಕಿ ಹೊರಗೆ ಅಂಗಳಕ್ಕೆ ಬಂದಾಗ ಪಕ್ಕದ ಮನೆಯವರು ನನ್ನಾಕೆಯ ಹತ್ರ, 'ಈಗ ಹೊರಟ್ರೆ ರಾತ್ರಿ ಹೋಗಿ ಮುಟ್ಟೀರಾ'? ಅಂತ ಕೇಳಿದ್ರು. ನನ್ನವಳ ಮುಖ ಕೆಂಪು ಕೆಂಪಾಯಿತು. ಅವಳುರಾಂಗ್ ಆದಳು ಎಂದು ನನಗೆ ಗೊತ್ತಾಯಿತು. ಅವಳು ಸಿಟ್ಟುಗೊಂಡು ಸ್ಫೋಟಗೊಳ್ಳುವ ಮೊದಲು ನಾನೇ ಅವರಿಗೆ 'ಹೌದು ನಾವು ರಾತ್ರಿ ಹತ್ತು ಗಂಟೆಗೆ ಹೋಗಿ ಮುಟ್ತೇವೆ' ಎಂದು ಹೇಳಿದೆ. ಬಸ್ಸ್ಟಾಂಡಿಗೆ ಆಟೋದಲ್ಲಿ ಹೋಗುತ್ತಿದ್ದಾಗ ನನ್ನವಳು ದುಮು ದುಮುಗುಡುತ್ತಾ, 'ಆ ಹೆಂಗಸಿಗೆ ಸ್ವಲ್ಪವೂ ನಾಚಿಕೆ ಇಲ್ಲ. ನಿಮಗೂ ಬುದ್ಧಿ ಇಲ್ಲ' ಅಂತ ಬೈದಳು. ನಾನು 'ಯಾಕೆ ಏನಾಯ್ತು'? ಅಂತ ಕೇಳಿದೆ. 'ಎಲ್ಲರ ಎದುರಿನಲ್ಲಿ ರಾತ್ರಿ ಹೋಗಿ ಮುಟ್ಟೀರಾ ಅಂತ ಕೇಳ್ತಾರೆ.' ಅಂತ ಬೈದಳು. ನಾನು ಮುಟ್ಟುವುದು ಅಂದರೆ ತಲುಪುವುದು ಅಂತ ಅವಳಿಗೆ ಅರ್ಥ ಮಾಡಿಸಲು ಹೋಗಿ ಸುಮಾರು ಶಕ್ತಿ ಕಳಕೊಂಡೆ.

ನನ್ನ ಮಾವ ನಮ್ಮ ಮನೆಯಲ್ಲಿ ಉಳಿಯಲು ಕೆಲವು ದಿನಗಳ ಮಟ್ಟಿಗೆ ಬಂದಿದ್ದರು. ಅವರಿಗೆ ಹೇರ್ ಕಟ್ಟಿಂಗ್ ಮಾಡಿಸಬೇಕಿತ್ತು. ಬೆಳಿಗ್ಗೆ ಎದ್ದು ವಾಕಿಂಗ್ ಜೊತೆಗೆ ಹೇರ್ ಕಟಿಂಗ್ ಮಾಡಿಸಬೇಕು ಎಂದು ಹೊರಟಿದ್ದರು. ಅವರು ದಾರಿಯಲ್ಲಿ ಹೋಗುತ್ತ ಶಿರಸಿಯ ಭಾಷೆಯಲ್ಲಿ 'ಇಲ್ಲಿ ನನಗೆ ಮಂಡೆ ಮಾಡಿಸಬೇಕು. ಎಲ್ಲಿ ಉಂಟು ಹತ್ತಿರದಲ್ಲಿ ಅಂಗಡಿ?' ಎಂದು ಒಬ್ಬಿಬ್ಬರ ಹತ್ರ ಕೇಳಿದರು. ಮಂಡೆ




ಮಾಡಿಸುವುದು ಎನ್ನುವುದು ಅರ್ಥವಾಗದವರು ಪಿಳಿಪಿಳಿ ಕಣ್ಣು ಬಿಟ್ಟಿದ್ದರು.

ಕೊನೆಗೆ ಅವರೇ ಕಟ್ಟಿಂಗಿನ ಅಭಿನಯ ಮಾಡಿ ತೋರಿಸಿದ ಮೇಲೆ 'ಓ ತಲೆ ಕತ್ತರಿಸುವುದಾ? ಇಲ್ಲಿಯೇ ಒಂದು ಫರ್ಲಾಂಗ್ ದೂರದಲ್ಲಿ ಉಂಟು' ಎಂದು ತೋರಿಸಿದರು. ತಲೆ ಕತ್ತರಿಸುವುದು ಎನ್ನುವ ಶಬ್ದ ಕೇಳಿ ಮಾವನವರು ಗಾಬರಿಗೊಂಡಿದ್ದರು. ಮತ್ತೊಂದು ಬಾರಿ ನನ್ನ ಭಾವ ಹಾಗೂ ಇನ್ನೊಬ್ಬರು ನೆಂಟರು ಶಿರಸಿಯಿಂದ ಉಡುಪಿಗೆ ಒಂದೇ ದಿನದ ಮಟ್ಟಿಗೆ ಬಂದು ಹೋದರು. ಬೆಳಿಗ್ಗೆ ಬಂದವರು ಹಾಗೆಯೇ ಮಧ್ಯಾಹ್ನ ಊಟ ಮಾಡಿ ಹಿಂತಿರುಗಿದ್ದರು. ಅದನ್ನು ಗಮನಿಸಿದ ಪಕ್ಕದ ಮನೆಯವರು 'ಅದೇನು ನಿಮ್ಮ ಮನೆಗೆ ಬಂದ ನೆಂಟರು ಕೂತ್ಕೊಳ್ಳಿಲ್ಲ? ಅವರು ನಾಲ್ಕು ದಿನ ಕೂತು ಹೋಗ್ಬಹುದಿತ್ತು ಅಂತ ಹೇಳಿದರು. ನನ್ನ ಹೆಂಡತಿ, 'ಇಲ್ಲ, ಅವರು ಕೂತಿದ್ದಾರೆ. ಇಡೀ ದಿನ ನಿಂತುಕೊಂಡು ಇರೂದಿಲ್ಲ' ಅಂತ ಹೇಳಿದ್ಲು. 'ಮತ್ತೆ... ಅವರು ಸಂಜೆ ವಾಪಸ್ ಹೋದದ್ದು ನೋಡಿದೆ?' ಅಂತ ಮರುಪ್ರಶ್ನೆ ಮಾಡಿದಾಗ, ಕೂತ್ಕೊಳ್ಳುವುದು ಅಂದರೆ ಉಳಿಯಲು ಬರುವುದು ಅಥವಾ ಉಳಿಯುವುದು ಎಂದು ಅಂತ ನನ್ನ ಹೆಂಡತಿಗೆ ಅರ್ಥವಾಯಿತು.

ಸುಮಾರು ವರ್ಷಗಳ ಹಿಂದೆ, ನನ್ನ ಸಂಬಂಧಿಕರು ಒಬ್ಬರ ಮಗಳ ಮದುವೆಯ ಸಂದರ್ಭದಲ್ಲಿ ಒಂದು ಘಟನೆ ನಡೆದಿತ್ತು. ಹುಡುಗನ ಕಡೆಯವರು ಬೆಂಗಳೂರಿನವರು. ಹುಡುಗನ ದಿಬ್ಬಣ ಹಿಂದಿನ ದಿನ ಸಂಜೆ ಬಂದು ಸೇರುತ್ತದೆ ಎಂಬ ಮಾಹಿತಿ ಇತ್ತು. ಆಗ ಮೊಬೈಲ್ ಇತ್ಯಾದಿ ಇದ್ದ ಕಾಲ ಅಲ್ಲ. ಹಿಂದಿನ ದಿನ ಸಂಜೆ ಮದುವೆಯ ಛತ್ರದಲ್ಲಿ ಹೆಣ್ಣಿನ ಕಡೆಯವರು ಮದುವೆಯ ಮಂಟಪದ ಅಲಂಕಾರ ಇತ್ಯಾದಿ ಕೆಲಸಗಳನ್ನು ಮಾಡಿಕೊಂಡು ಇದ್ದರು. ಆಗೆಲ್ಲ ಮದುವೆ ಎಂದರೆ ಒಂದೇ ದಿನ. ಸುಮಾರು ಆರು ಗಂಟೆಯ ಹೊತ್ತಿಗೆ ಒಂದು ಬಸ್ಸು ಹಾಗೂ ಒಂದೆರಡು ಸಣ್ಣ ಟೆಂಪೋ ಇದಿಷ್ವರಲ್ಲಿ ಹುಡುಗನ ಕಡೆಯವರು ಬಂದರು. ಅವರು ಬಂದ ಕೂಡಲೇ ಗಡಿಬಿಡಿಯಿಂದ ಅವರನ್ನು ಸ್ವಾಗತಿಸಲು ಹೆಣ್ಣಿನ ಸೋದರ ಮಾವ ಚಿಕ್ಕಪ್ಪಂದಿರು ನಾಲ್ಕಾರು ಮಂದಿ ಎದುರಾದರು. ಕೆಲವರು ಮದುವೆಗೆಂದು ಹೊಲಿಸಿದ್ದ ಜುಬ್ಬ ಇತ್ಯಾದಿಗಳನ್ನು ಧರಿಸಿದ್ದರು ಅವುಗಳ ತೋಳು ಉದ್ದವಾಗಿತ್ತು. ಅದನ್ನು ಮಡಚಿಕೊಳ್ಳುತ್ತಾ ಬಂದು ಗಂಡಿನ ಕಡೆಯವರ ಬಳಿ ಏನು ಏನು ಎಂದು ಕೇಳುತ್ತ ಎದುರಾದರು. ಇಷ್ಟೇ ಸಾಕಾಯಿತು ಗಂಡಿನ ಕಡೆಯವರು ರಾಂಗ್ ಆಗಲು. ತೋಳು ಮಡಚಿದ್ದು ಒಂದು.

'ಏನು' ಎಂದು ಕೇಳಿದ್ದು ಇನ್ನೊಂದು. 'ನಮ್ಮನ್ನು ಅವಮಾನಿಸಲೆಂದೇ ಹೀಗೆ ಕೇಳುತ್ತಿದ್ದಾರೆ. ಏನ್ ಅಂದ್ಕೊಂಡಿದ್ದಾರೆ ನಮ್ಮನ್ನು?! ಗಂಡಿನ ಕಡೆಯವರು ಅಂದ್ರೆ ಇಷ್ಟೊಂದು ಸದರವೇ? ಒಳ್ಳೆ ಹೊಡೆದಾಟಕ್ಕೆ ಕರೆಯುವವರ ಹಾಗೆ ಏನು ಏನು ಅಂತ ಕೇಳ್ತಾ ಇದ್ದಾರೆ. ಈ ಮದುವೆಯೇ ಬೇಡ' ಅಂತ ಜಗಳಕ್ಕೆ ನಿಂತು ಬಿಟ್ಟರು. ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮೊದಲು ಹೆಣ್ಣಿನ ಕಡೆಯ ಹಿರಿಯರು ಒಟ್ಟು ಸೇರಿ ವಿಷಯ ಹೀಗೆ ಹೀಗೆ. ಉಭಯ ಕುಶಲೋಪರಿ ವಿಚಾರಿಸುವಾಗ ನಮ್ಮ ಕಡೆಯಲ್ಲಿ ಏನು ಎಂದು ಕೇಳುವುದು ಪದ್ಧತಿ. ತೋಳು ಉದ್ದೇಶಪೂರ್ವಕವಾಗಿ ಮಡಚಿದ್ದಲ್ಲ. ಹೊಸದಾಗಿ ಹೊಲಿಸಿದ ಜುಬ್ಬಾದ ಕೈ ಉದ್ದ ಆಗಿತ್ತು. ಅದನ್ನು ಮಡಚಿಕೊಂಡದ್ದು ಅಷ್ಟೇ. ಅದರಿಂದ ನಿಮಗೆ ಬೇಜಾರಾದರೆ ಕ್ಷಮಿಸಿ. ಮದುವೆ ಮುರೀಬೇಡಿ.' ಅಂತ ಬಗೆಬಗೆಯಲ್ಲಿ ಮನವರಿಕೆ ಮಾಡಿಕೊಟ್ಟ ಮೇಲೆ ಗಂಡಿನ ಕಡೆಯವರು ಒಪ್ಪಿದರು.

ಕೆಲವು ವರ್ಷಗಳ ಹಿಂದೆ ಉಡುಪಿ ಕನ್ನಡದ ಒಂದು ಶಬ್ದವನ್ನು ಬಳಸಿ ನಾನು ಉಪವಾಸ ಬಿದ್ದಿದ್ದೆ. ಅದು ಹೇಗೆಂದರೆ, ನಾನು ಬೆಂಗಳೂರಿನಲ್ಲಿ ಗೆಳೆಯನ ಮನೆಗೆ ಹೋಗಿದ್ದೆ. ಮಧ್ಯಾಹ್ನದ ಹೊತ್ತು. ಸ್ವಲ್ಪ ಹೊತ್ತು ಮಾತನಾಡಿದ ಬಳಿಕ ಮನೆಯ ಒಳಗಿದ್ದ ಆತನ ಹೆಂಡತಿ ಹೊರಗೆ ಬಂದು,'ಊಟ ಮಾಡಿ ಹೋಗಿ' ಅಂತ ಹೇಳಿದಳು. ನಾನು ಆಯ್ತು ಅಂದೆ. ಸ್ವಲ್ಪ ಹೊತ್ತಾದ ನಂತರ, ಗೆಳೆಯ ಮನೆಯ ಒಳಗೆ ಹೋಗಿ, ಹೆಂಡತಿಯೊಂದಿಗೆ ಊಟ ಮಾಡತೊಡಗಿದ. ನಾನು ನನ್ನನ್ನು ಈಗ ಕರೆಯುತ್ತಾರೆ ಆಗ ಕರೆಯುತ್ತಾರೆ ಎಂದು ಕಾದಿದ್ದೇ ಬಂತು. ಊಟವಾದ ಮೇಲೆ ಡರ್ರನೆ ತೇಗುತ್ತ ಹೊರಗೆ ಬಂದು, 'ಎಂಥ ಮನುಷ್ಯನೋ ನೀನು? ನಮ್ಮ ಮನೆಗೆ ಬರುವಾಗ ಊಟ ಮಾಡಿ ಯಾಕೆ ಬಂದೆ?' ಅಂತ ಪಿರಿಪಿರಿ ಮಾಡಿದ. ಆಗ ನಾನು 'ನನ್ನದೆಲ್ಲಿ ಊಟವಾಗಿದೆ!?' ಎಂದು ಗಾಬರಿಯಿಂದ ಕೇಳಿದೆ. 'ಮತ್ತೆ ನೀನೇ ಅಂದ್ಯಲ್ಲೋ ಆಯ್ತು ಅಂತ' ಗೆಳೆಯ ಕೇಳಿದ. 'ಆಯ್ತು ಅಂದರೆ ಊಟ ಆಗಿದೆ ಅಂತ ಅರ್ಥ ಅಲ್ಲ. ನೀನು ಹೇಳಿದ್ದಕ್ಕೆ ಒಪ್ಪಿಗೆ ಅಂತ ಅರ್ಥ' ಅಂದೆ. ಪಾಪ ಗೆಳೆಯನ ಹೆಂಡತಿ ಮತ್ತೆ ಕುಕ್ಕರ್ ಇಟ್ಟು ಅನ್ನ ಮಾಡಿ ಬಡಿಸುವಾಗ ನಾನು ಹೈರಾಣಾಗಿದ್ದೆ. ಆ ಅನುಭವದ ನಂತರ ನಾನು 'ಆಯ್ತು' ಎನ್ನುವ ಶಬ್ದವನ್ನು ತುಂಬಾ ಎಚ್ಚರಿಕೆಯಿಂದ ಬಳಸಲು ಕಲಿತಿದ್ದೇನೆ.

ಪ್ರತಿಕ್ರಿಯಿಸಿ: feedback@sudha.co.in